ಟೋಪಿ ಧರಿಸಿದ್ದರು. ಲವಲವಿಕೆಯ ಉಲ್ಲಾಸದಿಂದ ಮುಂದೆ ಸಾಗುತ್ತಿದ್ದರು.

ಆಗಲೇ ಅಲ್ಲಿ ಅತಿವೇಗದಿಂದ ಧಾವಿಸಿ ಬಂದ ಕುದುರೆ ಗಾಡಿಯೊಂದು ರಭಸವಾಗಿ ಹಾದುಹೋಯಿತು. ಅದರೊಳಗೆ ಗಂಡಸರಿಬ್ಬರು ಲೋಲರಾಗಿ ಪಕ್ಕ ಪಕ್ಕ ಕುಳಿತಿದ್ದರೆ, ಒಬ್ಬ ಮಹಿಳೆ ಮಾತ್ರ ಅಲ್ಲೇ ಉಸ್ಸಂತ ಕೆಳಗೆ ಕೂತು ರಭಸದ ಕುಲುಕಾಟಗಳನ್ನು ನಿವಾರಿಸಿಕೊಳ್ಳಲು ಎಂಬಂತೆ ಗಾಡಿಯ ಎರಡೂ ಬದಿಗಳನ್ನು ಬಲವಾಗಿ ಹಿಡಿದುಕೊಂಡಿದ್ದಳು.

ಗುಡರ್‌ವೀಲ್‌ನ ಮುಖ್ಯ ವೃತ್ತದಲ್ಲಿ ಅಂದು ವಿಪರೀತ ಜನಸಂದಣಿ. ಒಂದು ವಿಧದಲ್ಲಿ ಅದು ಮನುಷ್ಯರ ಮತ್ತು ಪ್ರಾಣಿಗಳ ಸಮ್ಮಿಶ್ರ ಸಮೂಹ! ದನಗಳ ಉದ್ದನೆಯ ಕೊಂಬುಗಳು, ಶ್ರೀಮಂತ ರೈತರ ಸೊಗಸಾದ ಟೋಪಿಗಳು, ಲಲನೆಯರ ಸಿಂಗಾರದ ಹ್ಯಾಟುಗಳು... ಆ ಗುಂಪಿನಲ್ಲಿ ವಿಶೇಷವಾಗಿ ಮೇಲೆದ್ದು ಕಾಣುತ್ತಿದ್ದವು. ಕೆಲವು ಕೀಚಲು ಗಂಟಲುಗಳ ಹಾಗೆಯೇ ಹಲವಾರು ಕಂಚು ಕಂಠಗಳ ಒಂದು ಅನಾಗರಿಕ ಹುಯ್ಲು ಅಲ್ಲಿ ಅಹಿತಕರವಾಗಿ ಕೇಳ ಬರುತ್ತಿತ್ತು. ಆದರೆ, ಆಗೊಮ್ಮೆ ಈಗೊಮ್ಮೆ ಎಲ್ಲೋ ದೂರದಲ್ಲಿ ಕಟ್ಟಿರುವ ಹಸುಕರುಗಳ ಸುದೀರ್ಘ ಕೂಗು ಸಂತೆಯ ಬೊಬ್ಬೆಯನ್ನೂ ಮೀರಿಸಿ ಬಿಡುತ್ತಿತ್ತು. ಲಾಯ, ಕೊಟ್ಟಿಗೆ, ಕಸದ ಕುಪ್ಪೆ, ಮನುಷ್ಯರ ಮತ್ತು ಪ್ರಾಣಿಗಳ ಬೆವರು ವಾಸನೆ ಇವೆಲ್ಲ ಸೇರಿದ ವಿಚಿತ್ರವಾದ ಕಟು ವಾಸನೆಯೊಂದು ವಾತಾವರಣದ ತುಂಬೆಲ್ಲ ವ್ಯಾಪಿಸಿಕೊಂಡಿತ್ತು. ಹಸಿರು ಬಯಲುಗಳಲ್ಲಿ ಮುಕ್ತವಾಗಿ ಮತ್ತು ಸ್ವಚ್ಛವಾಗಿ ದುಡಿಯುವ ರೈತ ಜನರಿಗೆ ಈ ರೀತಿಯ ದುರ್ವಾಸನೆಗಳೇ ಹೊಸತು ಮತ್ತು ಅಸಹ್ಯ!

ಪಕ್ಕದ ಹಳ್ಳಿಯ ವೃದ್ಧ ರೈತ ಹಾಶ್‌ಕಾಮ್ ಆಗಷ್ಟೇ ಅಲ್ಲಿಗೆ ಬಂದು ತಲುಪಿದ್ದ. ಅವನು ಕೂಡ ಸಂತೆಮಾಳದತ್ತ ಅವನ ಪಾಡಿಗೆ ತಲೆತಗ್ಗಿಸಿ ನಿಧಾನವಾಗಿ ನಡೆಯುತ್ತಿದ್ದ. ಆಗ ಅವನಿಗೆ ನೆಲದ ಮೇಲೆ ಬಿದ್ದಿದ್ದ ಒಂದು ಸಣ್ಣ ತಂತಿಯ ತುಂಡು ಕಣ್ಣಿಗೆ ಬಿತ್ತು. ಅವನಂತೂ ಒಬ್ಬ ಪಕ್ಕಾ ನಾರ್ಮನ್! ಉಪಯೋಗಕ್ಕೆ ಬರಬಹುದಾದ ಯಾವುದೇ ವಸ್ತುವನ್ನೂ ಹಾಳುಮಾಡದೆ ಜೋಪಾನವಾಗಿ ತೆಗೆದಿಟ್ಟುಕೊಳ್ಳಬೇಕು ಅನ್ನುವ ಇರಾದೆಯವನು! ಹಾಗಾಗಿ, ಬಿಡದೆ ಬಾಧಿಸುವ ಕೀಲು ನೋವುಗಳ ಕಾರಣ ಬಲು ಮೆಲ್ಲಗೆ ಬಾಗಿ ತಂತಿಯ ತುಂಡನ್ನು ತೆಗೆದುಕೊಂಡು ಸಾವಕಾಶವಾಗಿ ಬೆರಳಿಗೆ ಸುತ್ತಿಕೊಳ್ಳುತ್ತಿರುವಾಗಲೇ ತನ್ನ ಮನೆಯ ಹೊಸ್ತಿಲ ಬಳಿಯೇ ನಿಂತಿದ್ದ ತನ್ನ ವಿರೋಧಿ ಮೆಲಾಂಡಿನ್ ಈ ಚರ್ಯೆಗಳನ್ನು ದುರುಗುಟ್ಟಿ ನೋಡುತ್ತಿರುವುದು ಕಾಣಿಸಿತು. ಹಾಗೆ ನೋಡಿದರೆ, ಇವರಿಬ್ಬರೂ ಮೊದಲಿಗೆ ಸ್ನೇಹಿತರಾಗಿದ್ದವರೇ... ಆದರೆ, ಕ್ರಮೇಣ ಬೇರೆ ಬೇರೆ ಕಾರಣಗಳಿಗಾಗಿ ಇಬ್ಬರಲ್ಲೂ ಮನಸ್ತಾಪ ಬಂತು. ಎಲ್ಲದರಲ್ಲೂ ಇಬ್ಬರೂ ಛಲ ಸಾಧಿಸುತ್ತಾ ಹೋದರು. ಹಾಗಾಗಿ, ಇದೀಗ ಪರಸ್ಪರ ತೀವ್ರ ದ್ವೇಷ ರೋಷಗಳು ಮನೆಮಾಡಿದ್ದವು.

ಪರಿಸ್ಥಿತಿ ಹೀಗಿರುವಾಗ ರಸ್ತೆ ಮೇಲಿನ ದೂಳಿನಿಂದ ಒಂದು ಯಃಕಶ್ಚಿತ್ ತಂತಿಯ ತುಂಡನ್ನು ತಾನು ಹೆಕ್ಕಿಕೊಂಡದ್ದನ್ನು ಈ ಮಿಲಾಂಡನ್ ಗಮನಿಸಿ ಬಿಟ್ಟಿದ್ದು ಹಾಶ್‌ಕಾಮ್‌ಗೆ ಅವಮಾನವಾಯಿತು. ನಾಚಿಕೆಯಿಂದ ಸತ್ತಂತಾದ. ಬೇಗಬೇಗನೆ ತಂತಿ ತುಂಡನ್ನು ಅಂಗಿಯೊಳಗೆ ಮರೆಮಾಡಿ ತಾನು ಕಳಕೊಂಡಿದ್ದೇನನ್ನೋ ಹುಡುಕುವವನಂತೆ ನಟಿಸುತ್ತಾ ಸ್ವಲ್ಪ ಹೊತ್ತು ಅಲ್ಲೇ ನಿಂತುಕೊಂಡ. ಆಮೇಲೆ ಪೆಚ್ಚು ಮುಖದಿಂದ ಮಾರ್ಕೆಟ್ಟಿನ ಕಡೆಗೆ ಮೆಲ್ಲಮೆಲ್ಲಗೆ ಹೆಜ್ಜೆ ಹಾಕತೊಡಗಿದ. ಈಗಂತೂ ನಾಚಿಕೆಯ ನೋವಿನಿಂದ ಅವನ ತಲೆ ಮೊದಲಿಗಿಂತ ಜಾಸ್ತಿ ಕೆಳಗೆ ಬಾಗಿ ಬಿಟ್ಟಿತ್ತು. ತಟ್ಟಾಡುತ್ತಾ ಕ್ರಮೇಣ ಅವನು ಕೂಡ ನಿಧಾನವಾಗಿ ಚಲಿಸುತ್ತಿದ್ದ ಆ ಗದ್ದಲದ ಗುಂಪಿನಲ್ಲಿ ಕಳೆದುಹೋದ.

ಅಲ್ಲಿ ಎಲ್ಲೆಲ್ಲೂ ವ್ಯಾಪಾರದ ಗಲಾಟೆ... ಕೊನೆಗಾಣದ ಚೌಕಾಸಿಯ ಭರಾಟೆ! ಹಳ್ಳಿಗಳಿಂದ ಬಂದಿದ್ದ ರೈತ ಮಹಿಳೆಯರು ಅಲ್ಲಲ್ಲೇ ಕೂತು ತಮ್ಮ ಗೋವುಗಳಿಂದ ಹಾಲು ಹಿಂಡಿ ಹಿಂಡಿ ತೆಗೆಯುತ್ತಿದ್ದರು. ಏನೋ ಗಡಿಬಿಡಿ ಏನೋ ಆತಂಕ ಆ ಮುಗ್ಧ ಮಹಿಳೆಯರ ಮೊಗಗಳಲ್ಲಿ! ಪಟ್ಟಣದ